# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪೂರ್ವ) ವಲಯ

ವಾರ್ಡ್ ಸಂಖ್ಯೆ:62 ರಾಮಸ್ವಾಮಿಪಾಳ್ಯ ವಾರ್ಡಿನಲ್ಲಿ ದಿನಾಂಕ:20-02-2021 ರಂದು ನಡೆದ ಸಭೆಯ ನಡವಳಿಗಳು

***ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)/ಪಿ.ಆರ್-35/2020-21 ದಿನಾಂಕ:21.09.2020ರ ಆದೇಶದಂತೆ ದಿನಾಂಕ:20.02.2021ರಂದು ವಾರ್ಡ್ ಸಂಖ್ಯೆ:62 ರಾಮಸ್ವಾಮಿ ಪಾಳ್ಯ (ಜಯಮಹಲ್ ಪಾರ್ಕ್) ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು:-***

**ಸಭೆಗೆ ಹಾಜರಿದ್ದವರು:**

| ಕ್ರ.ಸಂ. | ಹೆಸರು | ಸಮಿತಿ ಸಭೆಯ |
|---|---|---|
| 1. | ಶ್ರೀ ಎಸ್. ಉಮೇಶ್ | ಅಧ್ಯಕ್ಷರು/ನೋಡಲ್‌ಅಧಿಕಾರಿ/ಕಂದಾಯ ಅಧಿಕಾರಿ(ಶಾಂತಿನಗರ) |
| 2. | ಶ್ರೀ ರಾಜಶೇಖರ ಮೂರ್ತಿ ಡಿ.ಎನ್. | ಸಹಾಯಕ ಅಭಿಯಂತರರು(ವಸಂತನಗರ) |
| 3. | ಶ್ರೀ ಅನಿಲ್ ಕುಮಾರ್ | ಕಂದಾಯ ವಸೂಲಿಗಾರರು |
| 4. | ಶ್ರೀ ಪ್ರಶಾಂತ ನಾಯಕ | ಕಿರಿಯ ಆರೋಗ್ಯ ನಿರೀಕ್ಷಕರು |
| 5. | ಶ್ರೀಮತಿ ಜಯಮ್ಮ ಟಿ. | ಸದಸ್ಯರು/ಲಿಂಕ್ ವರ್ಕರ್ |
| 6. | ಶ್ರೀಮತಿ ಅನುಸೂಯ ಕೆ. | ಸದಸ್ಯರು/ಲಿಂಕ್ ವರ್ಕರ್ |
| 7. | ಶ್ರೀಮತಿ ಆರ್.ಮಹೇಶ್ವರಿ | ಸದಸ್ಯರು |
| 8 | ಶ್ರೀ ಹರೀಶ ಎಂ. | ಪೊಲೀಸ್, (ಜೆ.ಸಿ.ನಗರ) |
| 9 | ಶ್ರೀ ಸುರೇಶ್ ವಿ. | ಪೊಲೀಸ್, (ಜೆ.ಸಿ.ನಗರ) |
| 10 | ಶ್ರೀ ಕೆ.ಸಿ. ಶ್ರೀನಿವಾಸ ಮೂರ್ತಿ | ಎ.ಎಸ್.ಐ, (ಜೆ.ಸಿ.ನಗರ) |
| 11 | ಶ್ರೀಮತಿ ಸುಧಾಮಣಿ ಜೆ.ಎನ್. | ಟೈಲರಿಂಗ್ ಟೀಚರ್(ಕಲ್ಯಾಣ ಇಲಾಖೆ) |

ದಿನಾಂಕ:20.02.2021ರಂದು ಮಧ್ಯಾಹ್ನ 3.30 ಘಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ, ಮೊದಲಿಗೆ ಹಾಜರಿದ್ದ ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆ ಪ್ರಾರಂಭಗೊಳಿಸಿ ಹಿಂದಿನ ಸಭೆಯಲ್ಲಿ ನಡೆದ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

1. ವಾರ್ಡಿನ ರಸ್ತೆಗಳ ಸ್ವಚ್ಛತಾ ಕಾರ್ಯದ ಸಲುವಾಗಿ ಫೇಸ್ ಬುಕ್‌ನಲ್ಲಿ ಮತ ಚಲಾಯಿಸುವ ಬಗ್ಗೆ ಕುರಿತು ಅರಿವು ಮೂಡಿಸಲಾಯಿತು.

2. ವಾರ್ಡ್ 62ರಲ್ಲಿ ರಸ್ತೆಗಳಲ್ಲಿ ಉಂಟಾಗಿರುವ ಪಾಟ್‌ಹೋಲ್ಸ್‌ಗಳನ್ನು ರಸ್ತೆ ಅಗೆತದ ಗುಂಡಿಗಳನ್ನು ಮುಚ್ಚಲು ಸಹಾಯಕ ಅಭಿಯಂತರರವರಿಗೆ ಸೂಚಿಸಲಾಯಿತು.

3. ಕೋವಿಡ್-19ರ 2ನೇ ಅಲೆಯ ಬಗ್ಗೆ ಯಾವ ರೀತಿ ಮುಂಜಾಗ್ರತ ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎಂಬುದರ ಬಗ್ಗೆ ಚರ್ಚಿಸಲಾಯಿತು.

4. ಪೌರ ಕಾರ್ಮಿಕರಿಗೆ ವ್ಯಾಕ್ಸಿನೇಷನ್ ತೆಗೆದುಕೊಳ್ಳುವ ಬಗ್ಗೆ ಚರ್ಚಿಸಲಾಯಿತು.

ಕ್ರಮ: ಎಇಇ ರವರಿಗೆ ಕ್ರಮಕ್ಕೆ ಸೂಚಿಸಲಾಯಿತು.

5. ವಾರ್ಡ್ 62ರಲ್ಲಿ ಪೌರಕಾರ್ಮಿಕರಿಗೆ ತಂಗುದಾಣವನ್ನು ಎ.ಕೆ.ಕಾಲೋನಿಯಲ್ಲಿ ನಿರ್ಮಿಸುವ ಬಗ್ಗೆ ಚರ್ಚಿಸಲಾಯಿತು.

Scanned with CamScanner

ಕ್ರಮ: ಎಇಇ ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

6. ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಶಾಲಾ ಮಕ್ಕಳ ಶುಲ್ಕವನ್ನು ಅಂತರ್ಜಾಲದ ಮೂಲಕ ವಿತರಿಸುವ ಬಗ್ಗೆ ಚರ್ಚಿಸಲಾಯಿತು.

ಕ್ರಮ: ಎಇಇ ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

7. ವಾರ್ಡ್ 62ರಲ್ಲಿ ಸಹಾಯಕ ಕೇಂದ್ರದಲ್ಲಿ ಕೋವಿಡ್-19ರ ಪರೀಕ್ಷಾ ಕೇಂದ್ರವನ್ನು ನಡೆಸುತ್ತಿರುವ ಬಗ್ಗೆ ಚರ್ಚಿಸಲಾಯಿತು.

ಕ್ರಮ: ಎಇಇ ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

8. ವಾರ್ಡ್ 62ರಲ್ಲಿ ಬೀದಿ ನಾಯಿಗಳ ನಿಯಂತ್ರಣದ ಬಗ್ಗೆ ಚರ್ಚಿಸಲಾಯಿತು.

ಕ್ರಮ: ಎಇಇ ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

9. ವಾರ್ಡ್ 62ರಲ್ಲಿ ಪೌರಕಾರ್ಮಿಕರಿಗೆ ಆರ್.ಟಿ.ಜಿ.ಎಸ್. ಮೂಲಕ ನೇರವಾಗಿ ಸಂಬಳ ಪಾವತಿಯಾಗಿರುವ ಬಗ್ಗೆ ಮಾಹಿತಿ ನೀಡಲು ಸೂಚಿಸಲಾಯಿತು.

ಕ್ರಮ: ಎಇಇ ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

10. ವಾರ್ಡ್ 62ರಲ್ಲಿ ವಾರ್ಡ್ ಕಛೇರಿಯ ಸಿಬ್ಬಂಧಿಗಳಿಗೆ ಮಾಸ್ಕ್ ಮತ್ತು ಸ್ಯಾನಿಟೈಸರ್ ಒದಗಿಸುವ ಬಗ್ಗೆ ಸೂಚಿಸಲಾಯಿತು.

ಕ್ರಮ: ಎಇಇ ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

11. 2021-22ನೇ ಸಾಲಿನ ಆಯ ವ್ಯಯದ ಬಗ್ಗೆ ಅಂತರ್ಜಾಲದಲ್ಲಿ ಮಾಹಿತಿಯನ್ನು ಒದಗಿಸುವ ಬಗ್ಗೆ ಚರ್ಚಿಸಲಾಯಿತು.

ಕ್ರಮ: ಎಇಇ ಸಂಬಂಧಪಟ್ಟ ಅಧಿಕಾರಿಗಳಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

12. ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ ಬಗ್ಗೆ ಸಂಚಾರಿ ಪೊಲೀಸ್‌ಗೆ ಪತ್ರ ಬರೆಯಲು ಸಂಬಂಧಪಟ್ಟ ಎಇಇ ರವರಿಗೆ ಸೂಚಿಸಲಾಯಿತು.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯವನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಿಸಿದ ಅಧಿಕಾರಿಗಳು ಕೈಗೊಂಡ ಕ್ರಮದ ಬಗ್ಗೆ ವರದಿ ಪೂರ್ಣಗೊಂಡಿರುವ ಬಗ್ಗೆ ಸಭೆಯಲ್ಲಿ ತಿಳಿಸುವುದು. ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಶ್ರೀ ರಾಜಶೇಖರ್, ಸಹಾಯಕ ಅಭಿಯಂತರು ವಾರ್ಡ್ 62, ಸಂಜೆ 4.30ರ ವರೆಗೆ ಸಭೆ ಮುಕ್ತಾಯಗೊಳಿಸಲಾಯಿತು.

ವಾರ್ಡ್ ಕಾರ್ಯದರ್ಶಿ
ಸಹಾಯಕ ಅಭಿಯಂತರರು

ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:62(ರಾಮಸ್ವಾಮಿಪಾಳ್ಯ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with CamScanner